ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಸಂಪತ್ ಸಿರಿಮನೆ, ಎಂಜಿನಿಯರಿಂಗ್ ಮುಗಿಸಿ ಬಹುರಾಷ್ಟ್ರೀಯ ಕಂಪನಿ ಸೇರಿಕೊಂಡಿದ್ದವರು, ಸಿನಿಮಾದ ಮೋಹನ ಮುರಲಿಗೆ ಓಗೊಟ್ಟು ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಿನಿಮಾ ಮತ್ತು ಸಾಹಿತ್ಯ – ಎರಡು ಮಾಧ್ಯಮಗಳಲ್ಲೂ ನಿರತರು. ಸಹಾಯಕ ನಿರ್ದೇಶಕ, ಬರಹಗಾರರಾಗಿ ಹಲವು ಸಿನಿಮಾಗಳಿಗೆ ದುಡಿದಿದ್ದಾರೆ. 'ಸುಧಾ' ಯುಗಾದಿ ಪ್ರಬಂಧಸ್ಪರ್ಧೆ ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಬಹುಮಾನಿತರು. 2023ರ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಮೊದಲಿಗರು. 'ಲೆಟ್ಸ್ ಬ್ರೇಕಪ್' ಸಂಪತ್‌ರ ಪ್ರಕಟಿತ ಕಥಾಸಂಕಲನ.

ಸರಂಜಾಮುಗಳನ್ನು ಒಂದೊಂದಾಗಿ ಎತ್ತಿಕೊಂಡು ಮೊದಲ ಮಹಡಿಯಲ್ಲಿದ್ದ ತಮ್ಮ ರೂಮಿಗೆ ಸಾಗಿಸುತ್ತಿದ್ದ ಸಮಯದಲ್ಲೇ ಮೊದಲಿಗೆ ಸಂದೀಪ ಅರಿಹಂತನನ್ನು ನೋಡಿದ್ದು.

ಅರಿಹಂತ್ ಭಟ್, ಎಂಥಾ ಶಕ್ತಿಶಾಲಿ ಹೆಸರು! ಹೆಸರೆಂದರೆ ಹಾಗಿರಬೇಕು, ಕೇಳಿದರೆ ಎದುರಿಗೆ ನಿಂತವರು ಒಮ್ಮೆ ಥರಥರ ನಡುಗಬೇಕು. ನನ್ನದೂ ಹೆಸರಿದೆ, ಸಂದೀಪ ಅಂತೆ. ಕೇಳಿದವರಿಗೆ ಇವನಿಗೆ ಕಪಾಲಕ್ಕೆ ಹೊಡೆದರೂ ತಿರುಗಿ ಹೊಡೆಯುವುದಿಲ್ಲ ಎಂದು ಖಾತ್ರಿಯಾಗುತ್ತದೆ. ಅದು ನಿಜವೂ ಹೌದು!. ಬಹುಶಃ ಹೆಸರಿನಿಂದಲೇ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವುದೆಂದು ಕಾಣುತ್ತದೆ. ಅವನೊಬ್ಬ ಕಾರ್ತವೀರ್ಯ ಅಂಥ ಇದ್ದನಲ್ಲ ಪ್ರೈಮರಿ ಸ್ಕೂಲಿನಲ್ಲಿ, ಅವನು ಆರ್ಮಿಗೆ ಹೋದನಂತೆ. ಅವನ ಹೆಸರು ಕೇಳಿಯೇ ಇವನು ದೊಡ್ಡದಾಗಿ ಏನನ್ನಾದರೂ ಮಾಡುತ್ತಾನೆಂದು ಪಕ್ಕಾ ಇತ್ತು. ಇನ್ನೊಬ್ಬ ಮುದಸ್ಸರ್ ಅಜೀಜ್ ಅಂತ ಇದ್ದನಲ್ಲ, ಅವನು ಹತ್ತೊಂಬತ್ತು ವರ್ಷಕ್ಕೇ ಬಸ್ ಬಿಜಿನೆಸ್ ಶುರು ಮಾಡಿದ್ದಾನೆ. ಅವನೊಬ್ಬ ಸಂವರ್ತ ಅಂತ ಇದ್ದನಲ್ಲ, ಅವನು ಕಥೆ ಕವನ ಬರೆದುಕೊಂಡು ಸನ್ಮಾನ ಎಲ್ಲಾ ಮಾಡಿಸಿಕೊಳ್ಳುತ್ತಿದ್ದಾನೆ. ಹೈಸ್ಕೂಲಿನಲ್ಲಿ ನಾನಿಷ್ಟಪಟ್ಟಿದ್ದ ಚಿತ್ರಾಂಗದಾ ಆಗಲೇ ಧಾರಾವಾಹಿಯಲ್ಲೆಲ್ಲಾ ನಟಿಸುತ್ತಿದ್ದಾಳೆ. ನಾನು ಸಂದೀಪ. ಬರೀ ಸಂದೀಪ ಎಂದರೆ ಗೊಂದಲವಾಗುತ್ತದೆ, ನಾನು ಎಂ. ಸಂದೀಪ. ಎಸ್ ಮತ್ತು ಎಚ್ ಇನಿಷಿಯಲ್ಲಿನ ಇನ್ನಿಬ್ಬರು ಸಂದೀಪರು ನಮ್ಮ ಸೆಕ್ಷನ್ನಿನಲ್ಲೇ ಇದ್ದರಲ್ಲಾ! ಹೀಗೆ ನೂರರಲ್ಲೊಬ್ಬನಂತೆ ಬದುಕುವುದೇ ನನ್ನ ಜೀವನದ ಉದ್ದೇಶವೇ? ನನಗೂ ಅರಿಹಂತ್ ಎಂದು ಹೆಸರಿಟ್ಟಿದ್ದರೆ ನಾನೂ ಅವರಂತೆಯೇ ಖಡಕ್ ಆಗಿ ಬೆಳೆದಿರುತ್ತಿದ್ದೆ ಅಲ್ಲವೇ? ಸಂದೀಪನ ಯೋಚನೆ ಅವನ ಹೆಜ್ಜೆ ತಪ್ಪಿಸಿ ಬಕೆಟ್ಟು ಮೆಟ್ಟಿಲುಗಳ ಮೇಲೆ ಉರುಡುರುಡಿ ಕೆಳಗೆ ಬಿದ್ದಾಗ ರೂಂ ನಂಬರ್ ಒಂದರ ಬಾಗಿಲು ತೆರೆಯಿತು. ಅದರಿಂದ ಹೊರಗೆ ಬಂದ ಅರಿಹಂತ್ ಇವರಿಬ್ಬರೂ ಜ್ಯೂನಿಯರ್ಸ್ ಎಂಬುದನ್ನು ಗುರುತು ಹಿಡಿದು ಒಮ್ಮೆ ಅವರತ್ತ ದಿಟ್ಟಿಸಿ ನಂತರ ಸುತ್ತಲೂ ನೋಡಿ ಗಡಸು ಧ್ವನಿಯಲ್ಲಿ 'ಎಲ್ರೂ ಬನ್ರೋ' ಎಂದು ಕಿರುಚಿದರು. ಆ ಕೂಗಿನ ಪ್ರಭಾವ ಹೇಗಿತ್ತೆಂದರೆ ಭೂಮಿ ನಡುಗಿದಾಗ ಬಿಲಗಳಿಂದ ಇಲಿಗಳು ಪುಟುಪುಟು ಹೊರಗೆ ಬರುವಂತೆ ಎರಡೇ ಕ್ಷಣದಲ್ಲಿ ಇಡೀ ಹಾಸ್ಟೆಲ್ಲಿನ ಎಲ್ಲ ರೂಮುಗಳಲ್ಲೂ ಇದ್ದ ಸೀನಿಯರ್ರುಗಳು ಸೇನಾಧಿಪತಿಯ ಆಜ್ಞೆ ಪಾಲಿಸುವಂತೆ ಬಾಗಿಲಿನ ಬಳಿ ಬಂದಿದ್ದರು. ಎಲ್ಲರ ಕಡೆಗೆ ನೋಡಿ 'ಅವರು ಜ್ಯೂನಿಯರ್ರು, ಹೆಲ್ಪ್ ಮಾಡಣ' ಎಂದು ಹೇಳಿದ್ದಷ್ಟೇ, ಐದೇ ನಿಮಿಷದಲ್ಲಿ ಅಷ್ಟೂ ವಸ್ತುಗಳು ಮೊದಲ ಮಹಡಿಯ ನಮ್ಮ ಇಪ್ಪತ್ತೆರಡನೇ ಕೋಣೆಯ ಒಳಗಿದ್ದವು. ಎಂಥಾ ಗತ್ತು, ಎಂಥಾ ಪ್ರಭಾವಳಿ. ಕಿರಿಯರನ್ನು ಇಷ್ಟು ಚಂದ ಎದುರುಗೊಳ್ಳುವ ಇವರದ್ದೆಲ್ಲಾ ಎಂಥಹಾ ಒಳ್ಳೆಯ ಮನಸ್ಸು! ಅವತ್ತಿಡೀ ಸಂದೀಪ ಭರತನ ಜೊತೆ ನಾವು ಎಷ್ಟು ಪುಣ್ಯ ಮಾಡಿದ್ದೀವಿ, ಇಂಥಾ ಒಳ್ಳೆಯ ಜಾಗಕ್ಕೆ ಬಂದು ಸೇರಿಕೊಂಡೆವಲ್ಲಾ ಎಂದು ಹೇಳುತ್ತಾ ಕೃತಜ್ಞನಾಗುವುದರಲ್ಲೇ ಕಳೆದ.

ಸೆಕೆಂಡ್ ಪಿಯುಸಿಯವರೆಗೆ ಮನೆಯಲ್ಲೇ ಓದಿದ್ದ ಸಂದೀಪನಿಗೆ ಊರು ಬಿಟ್ಟು ಬಂದ ನಂತರದ ಮೊದಲ ವಾರದ ಹಾಸ್ಟೆಲ್ ವಾಸ್ತವ್ಯ ಹೆಚ್ಚೂಕಡಿಮೆ ಸ್ವರ್ಗದಂತಿತ್ತೆಂದರೆ ತಪ್ಪಾಗಲಿಕ್ಕಿಲ್ಲ. ಒಬ್ಬರು ಸೀನಿಯರ್ ಬಂದು 'ಲ್ಯಾಬ್ ಏಪ್ರಾನ್ ಎಲ್ಲಾ ದುಡ್ ಕೊಟ್ಟು ತಗೊಳ್ಳೋಕೆ ಹೋಗ್ಬೇಡಿ, ನಮ್ ಹತ್ರ ಇದೆ' ಎಂದರೆ,